## ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 498/2024

ಪ್ರಾಸಾ : 01

ಚಾಸಾ : 02

| | | |
|---|---|---|
| ಹೆಸರು | : | ಪವನ್ ಸದಾಯ್ |
| ತಂದೆಯ ಹೆಸರು | : | ಮಹದಾಯಿ ಸದಾಯ್ |
| ಪ್ರಾಯ | : | 35 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಕುಳಾಯಿ, ಮಂಗಳೂರು. |

ದಿಃ **18.09.2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

### ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿನಾಂಕ 04.10.2023 ರಂದು ಕಲ್ಲಡ್ಕದಲ್ಲಿ ಕೆಲಸದ ನಿಮಿತ್ತ ಬಂದಿದ್ದು, ಲಾರಿ ಸಂಖ್ಯೆ 5458 ರಲ್ಲಿ ಬಂದ ಮಾರ್ಬಲ್ ನ್ನು ಅನ್ ಲೋಡ್ ಮಾಡಲು ನಾನು ಮತ್ತು ಮೃತ ಶುಬಾಚಂದ್ರ ರವರು ಹೋಗಿದ್ದು, ಸದರಿ ಲಾರಿಯ ಹಿಂಬಾಗ ನಾನು ಕುಳಿತುಕೊಂಡಿದ್ದು, ಲಾರಿಯ ಮುಂಬಾಗ ಚಾಸಾ 3, ಮೃತ ಶುಬಾಚಂದ್ರ ರವರು ಕುಳಿತುಕೊಂಡಿದ್ದು, ಲಾರಿಯನ್ನು ಆರೋಪಿ ಚಲಾಯಿಸುತ್ತಿದ್ದನು. ಸದರಿ ದಿನದಂದು ಕಲ್ಲಡ್ಕದಿಂದ 10 ಗಂಟೆಗೆ ಹೊರಟು 11 ಗಂಟೆಗೆ ಒಡಿಯೂರು ಮಠದ ಬಳಿ ತಲುಪಿದಾಗ ಸ್ವಲ್ಪ ಮಂಜು ಕವಿದಿತ್ತು, ರಸ್ತೆ ಕೆಸರುಮಯವಾಗಿದ್ದು, ಲಾರಿ ತುಂಬಾ ಇಳಿಜಾರಿನಲ್ಲಿ ಆಕಸ್ಮಿಕವಾಗಿ ಮಂದಿರದ ಅಂಗಳಕ್ಕೆ ಬಿದ್ದಿರುತ್ತದೆ. ಅದರ ಪರಿಣಾಮ ನಾನು ಲಾರಿಯಿಂದ ಕೆಳಗೆ ಬಿದ್ದಿದ್ದು ಲಾರಿಯಲ್ಲಿದ್ದ ಮಾರ್ಬಲ್ ನನ್ನ ಕಾಲುಗಳ ಮೇಲೆ ಬಿದ್ದಿದ್ದು, ನನ್ನ ಕಾಲು

ಮುರಿದು ನನಗೆ ಪ್ರಜ್ಞೆ ತಪ್ಪಿರುತ್ತದೆ. ಲಾರಿಯ ಮುಂಬಾಗ ಕುಳಿತಿದ್ದ ಶುಬಾಚಂದ್ರರವರ ಎದೆಯ ಮೇಲೆ ಮಾರ್ಬಲ್ ಬಿದ್ದು ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ.

2. ನಂತರ ನನ್ನನ್ನು ಆ್ಯಂಬುಲೆನ್ಸ್ ಮೂಲಕ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಉಳಿದ ಗಾಯಾಳುಗಳನ್ನು ಬೇರೆ ಆ್ಯಂಬುಲೆನ್ಸ್ ಮೂಲಕ ಸದರಿ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಸ್ಪತ್ರೆಯಲ್ಲಿ ವೈದರು ಪರೀಕ್ಷಿಸಿ ಶುಬಾಚಂದ್ರರವರು ಮೃತ ಪಟ್ಟಿರುವುದಾಗಿ ತಿಳಿಸಿರುತ್ತಾರೆ. ನಂತರ ಅಲ್ಲಿಂದ ನನ್ನನ್ನು ಅಜಯ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ ಬೆಡ್ ಇಲ್ಲದ ಕಾರಣ ಪುನಃ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ನನಗೆ ಪ್ರಜ್ಞೆ ತಪ್ಪಿದ ಕಾರ ಏನಾಯಿತು ಎಂದು ಗೊತ್ತಿಲ್ಲ. ಸದರಿ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಎರಡು ಬಾವಚಿತ್ರಗಳಲ್ಲಿರುವ ಲಾರಿ ಸಂಖ್ಯೆ ಕೆಎ-19-ಎಬಿ-5458 ನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಾಗಿ ನಿ.ಪಿ. 1 ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂದಿಸಿದಂತೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಎಪಿಪಿಯವರಿಂದಃ –**

3. ಸದರಿ ಅಪಘಾತ ಲಾರಿ ಚಾಲಕನ ಅಜಾಗರೂಕತೆಯಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಶ್ರೀ ಗುರುದೇವದತ್ತ ಸಂಸ್ಥಾನ ಮಠದ ಗೋಪುರ ಗೊಡೆಯು ಹಾನಿಯಾಗಿದ್ದು, ಅದರಿಂದ ರೂ 1 ಲಕ್ಷದ 94 ಸಾವಿರ ನಷ್ಟ ಉಂಟಾಗಿರುತ್ತದೆ

ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಆರೋಪಿ ತಪ್ಪಿನಿಂದ ಸದರಿ ಅಪಘಾತ ಆಗಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಜಿ.ಎಂ. ಕೆ. ವಕೀಲರಿಂದಃ</u>**

4. ನಾನು ಚಾಸಾ 1 ರವರ ಅದೀನದಲ್ಲಿ ಕೆಲಸ ಮಾಡುತ್ತಿದ್ದೆ. ಸದರಿ ದಿನ ನಾನು ಮಂಗಳೂರಿನ ಕಲ್ಲಡ್ಕಕ್ಕೆ ನನ್ನ ಮಾಲೀಕರ ವಾಹನದಲ್ಲಿ ಬಂದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಸದರಿ ದಿನದಂದು ನಾನು ಅಪಘಾತ ಆದ ವಾಹನದಲ್ಲಿ ಹೊಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ಲಾರಿ ಇಳಿಜಾರು ಪ್ರದೇಶದಲ್ಲಿ ನಿಂತಿತ್ತು, ಚಾಲನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಸ್ತೆ ಇಳಿಜಾರಿನಿಂದ ಕೂಡಿದ್ದ ಕಾರಣ ನಿಂತಿದ್ದ ಲಾರಿ ತಾನಾಗಿಯೇ ಮುಂದಕ್ಕೆ ಚಲಾಯಿಸಿ ಬಿದ್ದ ಕಾರಣ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ಹೇಳಿಕೊಟ್ಟ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಸದರಿ ಲಾರಿಯಲ್ಲಿ ಸಂಚರಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**ಸಾಕ್ಷಿಗೆ ಕನ್ನಡ ಭಾಷೆ ಬರೆಯಲು ಮತ್ತು ಓದಲು ಬರದೆ ಇರುವುದರಿಂದ ಹಿಂದಿ ಭಾಷೆಯಲ್ಲಿ ಸಾಕ್ಷ್ಯ ನುಡಿದಿದ್ದು, ಕನ್ನಡ ಭಾಷೆ ಹಾಗೂ ಹಿಂದಿ ಭಾಷೆ ಬಲ್ಲವರಾದ ಶ್ರೀ ಎಂ. ಎಲ್. ಆರ್. ಕೆ ವಕೀಲರ ಮೂಲಕ ಕನ್ನಡ ಭಾಷೆಗೆ ಭಾಷಾಂತರಿಸಿ ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ